4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 160/2023

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಉಪ ನಿರೀಕ್ಷಕರು,
(ಕಾನೂನು ಮತ್ತು ಸುವ್ಯವಸ್ಥೆ)
ದೇವರಾಜ ಪೊಲೀಸ್ ಠಾಣೆ,
ಮೈಸೂರು

**ವಿರುದ್ಧ**

ಆರೋಪಿತರು : ಶ್ರೀ ಸೋಮಶೇಖರ @ ಸೋಮ
ಹಾಗೂ ಇನ್ನೊಬ್ಬರು

# <u>ದೋಷಾರೋಪಣೆ</u>

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ

ಕೆಳಕಂಡ ಆರೋಪಿಯಾದ :-

1. ಶ್ರೀ ಸೋಮಶೇಖರ
@ ಸೋಮ,
ಬಿನ್ ಲೇಟ್ ಚನ್ನಯ್ಯ,
ವಾಸ:-ನಂ.769,
ಅಂಬೇಡ್ಕರ್ ಕಾಲೋನಿ,
ವಾಜಮಂಗಲ ಗ್ರಾಮ,
ವರುಣಾ ಹೋಬಳಿ,
ಮೈಸೂರು ಜಿಲ್ಲೆ.
2. ಶ್ರೀ ಮಹದೇವ @ ಮಹದೇವ
ಬಿನ್ ಲೇಟ್ ಮಾದಯ್ಯ,

ಅಂಬೇಡ್ಕರ್ ರಸ್ತೆ ,
ವಾಜಮಂಗಲ,
ವರುಣಾ ಹೋಬಳಿ,
ಮೈಸೂರು ತಾಲ್ಲೂಕು.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

1 ನೇ ಆರೋಪಿ ಸೋಮಶೇಖರನ ಹೆಂಡತಿಯಾದ ಸಾಕ್ಷಿ 12 ರವರಿಗೆ ಪ್ರಕರಣದಲ್ಲಿ ಮೃತರಾಗಿರುವ ಪ್ರಜ್ವಲ್ ರವರು ಅವರ ಮೊಬೈಲ್ ನಂಬರ್ 8073345203 ರಿಂದ ಸಾಕ್ಷಿ 12 ಅವರ ಮೊಬೈಲ್ ನಂ.7619145109 ಗೆ ದಿನಾಂಕ 10-01-2022 ರಂದು ಕರೆಮಾಡಿ ನಿನಗೆ ದುಡ್ಡು ಕೊಡುತ್ತೇನೆ ನನ್ನ ಜೊತೆ ಸೆಕ್ಸ್ ಮಾಡಿಸ್ಕೊ ಬಾ ಎಂದು ಕರೆಯುತ್ತಿದ್ದರಿಂದ ದಿನಾಂಕ-13-01-2022 ರಂದು 1 ನೇ ಆರೋಪಿರವರು ನಿಮ್ಮ ಸ್ನೇಹಿತನಾದ 2 ನೇ ಆರೋಪಿ ಹಾಗೂ ಸಾಕ್ಷಿ 1 ರವರೊಂದಿಗೆ ಕೆಎ-09 ಡಿ-0929 ಮಾರುತಿ ಸ್ವಿಫ್ಟ್ ಕಾರಿನಲ್ಲಿ ಪ್ರಜ್ವಲ್ ನು ಕೆಲಸ ನಿರ್ವಹಿಸುತ್ತಿದ್ದ ದೇವರಾಜ ಪೊಲೀಸ್ ಠಾಣಾ ಸರಹದ್ದಿನ ಅದ್ವೈತ್ ರೆಸಿಡೆನ್ಸಿ ಬಳಿ ಮಧ್ಯಾಹ 12-03 ಗಂಟೆ ಸಮಯಕ್ಕೆ ಬಂದು, ಅದ್ವೈತ್ ರೆಸಿಡೆನ್ಸಿ ಮುಂಭಾಗ ರಸ್ತೆಯಲ್ಲಿ ಪ್ರಜ್ವಲ್ಗಾಗಿ ಕಾಯುತ್ತಿದ್ದ ಸಮಯದಲ್ಲಿ ಆರೋಪಿತರಾದ ನಿಮ್ಮ ಸ್ನೇಹಿತನಾದ ಸಾಕ್ಷಿ-1 ರವರು ನಿಮ್ಮನ್ನು ನೋಡಿ ಮಾತನಾಡಿಸಿ, ಏನ್ರೋ ಇಲ್ಲಿ ಏನು ಮಾಡುತ್ತಿದ್ದೀರಿ ಎಂದು ಕೇಳಿದಾಗ, ಆರೋಪಿ-1 ರವರು ಸಾಕ್ಷಿ-11 ರವರಿಗೆ ಇರುವ ವಿಷಯ ತಿಳಿದಾಗ ಸಾಕ್ಷಿ-11 ರವರೂ ಸಹ ಆರೋಪಿಯೊಂದಿಗೆ ಇದ್ದ ಸಮಯದಲ್ಲಿ ಸಾಕ್ಷಿ 1 ರವರು ತಮ್ಮ ಮಗ ಪ್ರಜ್ವಲ್ ನನ್ನು ಅದ್ವೈತ್ ರೆಸಿಡೆನ್ಸಿ ಮುಂಭಾಗಕ್ಕೆ ಕರೆದುಕೊಂಡು ಬಂದಾಗ 1 ನೇ ಆರೋಪಿಯಾದ ನೀವು ಪ್ರಜ್ವಲ್‌ನಿಗೆ "ಯಾಕೋ ನನ್ನ ಹೆಂಡತಿಗೆ ಫೋನ್ ಮಾಡುತ್ತೀಯ, ಅವಳ ನಂಬರ್ ಯಾರು ಕೊಟ್ಟರು" ಎಂದು ಕೇಳಿದಾಗ ಪ್ರಜ್ವಲನ್ನು ಏನನ್ನೂ ಮಾತನಾಡದೆ ನಿಂತಿದ್ದಾಗ 1 ನೇ ಆರೋಪಿಯಾದ ನೀವು ಪ್ರಜ್ವಲನಿಗೆ ಕೈಯಿಂದ ತಲೆಗೆ, ಮೈಕೈಗೆ ಹೊಡೆದಿದ್ದು, ಆ ಕಾರಣದಿಂದ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಪ್ರಜ್ವಲನು ಏನನ್ನು

ಹೇಳದೆ ಇದ್ದಾಗ ಆರೋಪಿ 2 ಆದ ನೀವು ಪ್ರಜ್ವಲನ್ನು ಉದ್ದೇಶಿಸಿ "ಹೇಳೋ ಬೋಳಿ ಮಗನೆ, ಹೇಳಲಿಲ್ಲ ಅಂದರೆ ನಿನ್ನನ್ನು ಸುಮ್ಮನೆ ಬಿಡೋದಿಲ್ಲ, ನೋಡು" ಎಂದು ಪ್ರಾಣ ಬೆದರಿಕೆ ಹಾಕಿ, ಆ ಕಾರಣದಿಂದ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಪ್ರಜ್ವಲನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಕಾರಣದಿಂದ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ನೇ ಆರೋಪಿ ಯಾದ ನೀವು ಪ್ರಜ್ವಲನಿಗೆ "ನಿನ್ನನ್ನು ಉಳಿಸುವುದಿಲ್ಲ, ನೀನು ಸಾಯಬೇಕು, ಇಲ್ಲ ನಿನಗೆ ಏನಾದರೂ ಒಂದು ಗತಿ ಕಾಣಿಸ್ತೀವಿ ನೋಡು ಎಂದು ಬೆದರಿಕೆ ಹಾಕುವ ಸಮಯದಲ್ಲಿ ಆರೋಪಿತರಾದ ನಿಮ್ಮ ಜೊತೆಯಲ್ಲಿದ್ದ ಸಾಕ್ಷಿ 11 ರವರು ಎಲ್ಲರನ್ನು ಸಮಾಧಾನ ಮಾಡಿ ಇಲ್ಲಿ ಗಲಾಟೆ ಮಾಡಿಕೊಳ್ಳೋದು ಬೇಡ, ಪೊಲೀಸ್ ಸ್ಟೇಷನ್ ಗೆ ಹೋಗೋಣ ಎಂದು ಹೇಳಿದ್ದು , ಪ್ರಜ್ವಲನು ಆಯಿತು ಹೋಟೆಲ್ ಯೂನಿಫಾರಂ ಬಿಚ್ಚಿ ಬರತ್ತೇನೆಂದು ಹೇಳಿ ಅದ್ವೈತ್ ರೆಸಿಡೆನ್ಸಿ ಒಳಗೆ ಹೋದವನು ಅದ್ವೈತ್ ರೆಸಿಡೆನ್ಸಿಯವರು ತಮ್ಮ ಕೆಲಸಗಾರರಿಗೆ ರೆಸಿಡೆನ್ಸಿ ಮೇಲ್ಭಾಗ ನೀಡಿರುವ ರೂಮಿನಲ್ಲಿ ಬಟ್ಟೆ ಚೇಂಜ್ ಮಾಡಿ ಆತನ ಜೊತೆಗಾರರಾದ ಸಾಕ್ಷಿ–2 ಮತ್ತು ಸಾಕ್ಷಿ–13 ರವರ ಜೊತೆ ಹಿಂಬದಿಯಲ್ಲಿ ಬರುವಾಗ ನಾನು ಆರೋಪಿತರ ಜೊತೆಯಲ್ಲಿ ಹೋದರೆ ತನ್ನನ್ನು ಉಳಿಸುವುದಿಲ್ಲ ವೆಂಬ ಭಯದಿಂದ ಹಾಗೂ 1 ನೇ ಆರೋಪಿ ಯಾದ ನೀವು ಪ್ರಜ್ವಲನಿಗೆ ನೀನೆ ಸಾಯಬೇಕು, ಇಲ್ಲ ನಾವೇ ನಿನಗೆ ಒಂದು ಗತಿ ಕಾಣಿಸುತ್ತೇನೆಂದು ಭಯವುಂಟುಮಾಡಿ, ಪ್ರಜಲಿಗೆ ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ ನೀಡಿದ್ದರಿಂದ ಪ್ರಜ್ವಲನು ಅದ್ವೈತ್ ರೆಸಿಡೆನ್ಸಿ ಮೇಲಿಂದ ಬಿದ್ದು, ಕಾಲು ಮತ್ತು ತಲೆಗೆ ತೀವ್ರ ಸ್ವರೂಪದ ಪೆಟ್ಟು ಮಾಡಿಕೊಂಡು ಕೆ.ಆರ್.ಆಸ್ಪತ್ರೆಯಲ್ಲಿ, ಚಿಕಿತ್ಸೆ ಪಡೆಯುವಾಗ ಮಧ್ಯಾಹ್ನ 03–10 ಗಂಟೆಯಲ್ಲಿ, ಮೃತಪಟ್ಟಿದ್ದು, ಆ ಕಾರಣದಿಂದ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 306 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ

11.10.2023 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 160/2023

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ನಿರೀಕ್ಷಕರು,
ಹುಣಸೂರು ನಗರ ಪೊಲೀಸ್ ಠಾಣೆ,
ಹುಣಸೂರು ಉಪ ವಿಭಾಗ,
ಮೈಸೂರು ಜಿಲ್ಲೆ .

**ವಿರುದ್ಧ**

**ಆರೋಪಿ–1** ಶ್ರೀ ಸೋಮಶೇಖರ @ ಸೋಮ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 11.10.2023 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
**4** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 106/2021

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಉಪ ನಿರೀಕ್ಷಕರು,
(ಕಾನೂನು ಮತ್ತು ಸುವ್ಯವಸ್ಥೆ)
ದೇವರಾಜ ಪೊಲೀಸ್ ಠಾಣೆ,
ಮೈಸೂರು

**ವಿರುದ್ಧ**

**ಆರೋಪಿ-2** ಶ್ರೀ ಮಹದೇ @ ಮಹದೇವ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 11.10.2023 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.